## ಪ್ರವಾಸಿಗರ ಆಕರ್ಷಣೆ

ಸುಂದರವಾದ ಕಾಂಜೀವರಂ ಸೀರೆಗಳಿಗೆ ಹೆಸರುವಾಸಿಯಾಗಿರುವ ಕಾಂಚಿಪುರಂ ತಮಿಳುನಾಡಿನ ಪ್ರವಾಸಿಗರ ಆಕರ್ಷಣೆಯಾಗಿದೆ. ಕಾಂಚಿಪುರಂ ನಗರದ ಹೆಚ್ಚಿನ ಉದ್ಯೋಗಿಗಳು ನೇಯ್ಗೆ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದು, ಕಾಂಚಿಪುರಂ ರೇಷ್ಮೆ ಸೀರೆಯ ಕಥೆ ಹಿಂದೂ ಪುರಾಣದಲ್ಲಿ ಪ್ರಾರಂಭವಾಗುತ್ತದೆ. ದಂತಕಥೆಯ ಪ್ರಕಾರ ಕಾಂಚಿಪುರಂ ರೇಷ್ಮೆ ನೇಕಾರರು ಋಷಿ ಮಾರ್ಕಂಡ ವಂಶಸ್ಥರು. ಕಾಂಚಿಪುರಂ ಸಣ್ಣ ಪಟ್ಟಣವಾಗಿದ್ದು, ಇಲ್ಲಿನ ಸೀರೆ ನೇಯ್ಗೆ 400 ವರ್ಷಗಳ ಹಿಂದಿನಿಂದಲೂ ಬಳಕೆಯಲ್ಲಿದೆ. ಈ ಕಲೆ ನಿಜವಾಗಿಯೂ ಕೃಷ್ಣ ದೇವರಾಯರ (ವಿಜಯನಗರ ಸಾಮ್ರಾಜ್ಯ) ಆಳ್ವಿಕೆಯಲ್ಲಿ ಹೊರಹೊಮ್ಮಿತು.

ಆಂಧ್ರಪ್ರದೇಶದ ಎರಡು ಪ್ರಮುಖ ನೇಯ್ಗೆ ಸಮುದಾಯಗಳಾದ ದೇವಾಂಗ ಮತ್ತು ಸಾಲಿಗರು ಕಾಂಚಿಪುರಂ ಪಟ್ಟಣಕ್ಕೆ ವಲಸೆ ಬಂದರು. ಆಗ ಹಳ್ಳಿಯ ಸುತ್ತಮುತ್ತಲಿನ ದೇವಾಲಯಗಳಲ್ಲಿ ಕಂಡುಬರುವ ಗ್ರಂಥಗಳು ಮತ್ತು ಪ್ರತಿಮೆಗಳ ಚಿತ್ರಗಳನ್ನು ನೋಡಿ ಆ ಕೌಶಲ್ಯವನ್ನು ರೇಷ್ಮೆ ಸೀರೆ ತಯಾರಿಕೆಗೆ ಬಳಸಿದರು.

ಕಾಂಚಿಪುರಂ ಸೀರೆಗಳನ್ನು ದೇವರಿಗಾಗಿ ನೇಯಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಸುಂದರವಾದ ಕಾಂಚಿಪುರಂ ರೇಷ್ಮೆ ಸೀರೆಗಳು ದೇಶಾದ್ಯಂತ ಅತ್ಯಂತ ಜನಪ್ರಿಯವಾಗಿದ್ದು, ಶುದ್ಧ ಹಿಪ್ಪುನೇರಳೆ ರೇಷ್ಮೆಯಿಂದ ನೇಯಲಾಗುತ್ತದೆ. ಸೀರೆಗಳ ಜರಿ ಗುಜರಾತಿನದ್ದು. ಸೀರೆಯ ಸೊಗಸಾದ ವಿನ್ಯಾಸಗಳನ್ನು ರಚಿಸಲು ಒಂದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ನೇಕಾರರು ಕೆಲಸ ಮಾಡಬೇಕಾಗುತ್ತದೆ. ಸೀರೆಗಳು ಅನೇಕ ಬಣ್ಣಗಳಲ್ಲಿ ಲಭ್ಯವಿದ್ದು, ಚಿನ್ನದ ಎಳೆಗಳನ್ನು ಹೊಂದಿರುವ ಭಾರವಾದ ಸೀರೆಗಳನ್ನು ಸಾಮಾನ್ಯವಾಗಿ ಮದುವೆ ಸಂದರ್ಭಗಳಲ್ಲಿ ಧರಿಸಲಾಗುತ್ತದೆ. ಸೀರೆಯ ಪಲ್ಲು ಮತ್ತು ಬಾರ್ಡರ್‌ಗಳಲ್ಲಿ ಸಾಮಾನ್ಯವಾಗಿ ದಕ್ಷಿಣ ಭಾರತದ ದೇವಾಲಯಗಳಲ್ಲಿ ಕಂಡುಬರುವ ಸಂಕೀರ್ಣ ಕೆತ್ತನೆಗಳ ಚಿತ್ರಗಳನ್ನು ವಿನ್ಯಾಸಗೊಳಿಸಲಾಗಿರುತ್ತದೆ.

ಅಷ್ಟೇ ಏಕೆ, ರಾಜಾ ರವಿವರ್ಮ ಅವರ ವರ್ಣಚಿತ್ರಗಳು ಮತ್ತು ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ದೃಶ್ಯಗಳಿರುವ ವಿನ್ಯಾಸಗಳ ಸೀರೆಯನ್ನು ನೋಡಬಹುದು.

ಮನೆಯಲ್ಲಿ ಮದುವೆ ಸಮಾರಂಭ ನಿಶ್ಚಯವಾದದ್ದೇ ತಡ. ಅನೇಕ ಮಂದಿ ಸೀರೆ ಖರೀದಿಗಾಗಿ ತಮಿಳುನಾಡಿನ ಕಾಂಚಿಪುರಕ್ಕೆ ಧಾವಿಸುತ್ತಾರೆ. ಕಂಚಿ ಸೀರೆ ದೇಶ ವಿದೇಶಗಳಲ್ಲಿ ಹೆಸರುವಾಸಿಯಾದದ್ದು ಇಂದು ನಿನ್ನೆಯಲ್ಲ. ಅನಾದಿ ಕಾಲದಿಂದಲೂ ಕಾಂಜೀವರಂ ಸೀರೆಗೆ ಎಲ್ಲಿಲ್ಲದ ಬೇಡಿಕೆ.

ನಾನು ಕಂಚಿಗೆ ಹೋಗಿದ್ದ ಸಂದರ್ಭದಲ್ಲಿ ಕಂಚಿ ಸೀರೆಯ ಮಹತ್ವದ ಬಗ್ಗೆ ಅಲ್ಲಿನ ಸೀರೆ ವರ್ತಕರಲ್ಲಿ ಸುಮ್ಮನೆ ವಿಚಾರಿಸಿದೆ. ಕಂಚಿ ಸೀರೆ ರೇಷ್ಮೆಯ



ತಾಜಾತನ ಕಾಪಾಡಿಕೊಳ್ಳಲು ಕಾರಣ ಕೇಳಿದಾಗ ರೇಷ್ಮೆ ಸೀರೆ ವಿನ್ಯಾಸಗಾರರು ಹೇಳಿದ್ದಿಷ್ಟು. 'ರೇಷ್ಮೆ ಸೀರೆಗೆ ಆಕರ್ಷಕ ಬಣ್ಣ ಬರಲು ಸೋಪ್ ವಾಟರ್, ವಿಸಿಟಿಕ್ ಆಸಿಡ್‌ಗಳಿಂದ ತುಂಬಿಸಿದ ಹಂಡೆಗಳಲ್ಲಿ ಕುದಿಸಿ ತೆಗೆಯುತ್ತೇವೆ. ನಮ್ಮಲ್ಲಿ ಒಂದೇ ದಿನಕ್ಕೆ ಇಬ್ಬರು ಸುಮಾರು 200 ಕೆ.ಜಿ.ಗಳ ಕಚ್ಚಾದಾರಕ್ಕೆ ಬಣ್ಣವನ್ನು ಅದ್ದಿ ತೆಗೆಯುತ್ತಾರೆ. ಜರಿಯ ವಿಚಾರದಲ್ಲೂ ನೀತಿ ನಿಯಮಗಳಿವೆ. ಅದರಿಂದಾಗಿಯೇ ಜರಿ, ಜರ್ಮನ್ ಜರಿ ಎಂಬ ವೈವಿಧ್ಯ ಸಿದ್ಧವಾಗುತ್ತದೆ. ಇವುಗಳಲ್ಲಿ ಜರ್ಮನ್ ಜರಿ ಸೀರೆಗಳು ಅಪ್ಪಟ ಎನಿಸಿವೆ. ಇದಕ್ಕೆ ಚಿನ್ನದಲ್ಲಿ ಹಾಲ್‌ಮಾರ್ಕ್ ಇರುವಂತೆ ಸೀರೆಗಳಿಗೆ ಸ್ಟಿಕ್ಕರ್ ಹಾಕುತ್ತೇವೆ. ಇದರಿಂದ ನಕಲಿ ಸೀರೆಯ ಹಾವಳಿ ತಪ್ಪುತ್ತದೆ' ಎನ್ನುತ್ತಾರೆ.

ನಮ್ಮ ಭಾರತೀಯ ಸಂಸ್ಕೃತಿಯ ಪ್ರತಿರೂಪದಂತಿರುವ ಈ ಸೀರೆ, ಕುಂಕುಮ ಸಂಪ್ರದಾಯಗಳಿಂದ ನಮ್ಮ ಭಾರತೀಯರ ಘನತೆ, ಗಾಂಭೀರ್ಯಗಳು ಹೆಚ್ಚಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಲಾತ್ಮಕ ಸೃಷ್ಟಿಗೆ ಈ ಆರು ಗಜದ ಸೀರೆಗಳ ಹೊರತುಪಡಿಸಿ ಮತ್ತೊಂದಿಲ್ಲ. ಪ್ರಪಂಚದಲ್ಲಿ ಭಾರತೀಯ ಮಹಿಳೆಯರು ಧರಿಸುವ ಸೀರೆ ಅದ್ಭುತ. ಮತ್ತು ಆಕರ್ಷಕವೆಂದು ಆಂಗ್ಲ ಬರಹಗಾರರು ತಮ್ಮ ಬರಹಗಳಲ್ಲಿ ಬರೆಯುತ್ತಾರೆ. ಅಷ್ಟೇ ಏಕೆ, ನಮ್ಮ ದೇಶಕ್ಕೆ ವಿಹಾರಕ್ಕೆಂದು ಬರುವ ವಿದೇಶಿಯರು ಇಲ್ಲಿಯ ಕಂಚಿ, ಮೈಸೂರ್ ಸಿಲ್ಕ್‌ಗೆ ಮಾರುಹೋಗಿ ಕೇಳಿದಷ್ಟು ಬೆಲೆತೆತ್ತು ಕೊಂಡುಕೊಂಡು ಹೋಗುವುದು, ಸರ್ವೇಸಾಮಾನ್ಯ. ಸೀರೆ ಕೇವಲ ಹೆಣ್ಣಿಗೆ ವಸ್ತ್ರವೊಂದೇ ಅಲ್ಲ. ಆಕೆಗೊಂದು ಆಭರಣ. ಆಕೆಯ ಸೌಂದರ್ಯವನ್ನು ಇಮ್ಮಡಿಗೊಳಿಸುವ ಒಂದು ಸಂಸ್ಕಾರ ಬದ್ಧವಾದ ಉಡುಗೆ.

### ತವರಿನೊಂದಿಗೆ ಸೀರೆಯ ಅನುಬಂಧ

ಮದುವೆ ಸಂದರ್ಭಗಳಲ್ಲಿ ಸೀರೆಗಳನ್ನು ಉಡುಗೊರೆ ಕೊಡುವುದು, ಪಡೆಯುವುದು, ಎಂತಹ ಧನ್ಯತಾ ಭಾವನೆ ಕೊಡುತ್ತದೆ ಎಂಬುದು ಅದನ್ನು ಅನುಭವಿಸಿದವರಿಗೆ ಅರಿವಾಗುವುದು. ಹೆಣ್ಣುಮಕ್ಕಳಿಗೆ ತವರು ಮನೆಯ ವ್ಯಾಮೋಹವೇ ಸೀರೆಗಳೊಂದಿಗೆ ಬೆಸೆದುಕೊಂಡಿರುತ್ತದೆ. ಹಬ್ಬ ಹರಿದಿನಗಳಲ್ಲಿ ತವರುಮನೆಯಿಂದ ಸೀರೆ ಬಳುವಳಿಯಾಗಿ ಬಂದರೆ, ಅದೆಷ್ಟು ಭಾವುಕತೆಯ ಸಂತೋಷ, ಸಂಭ್ರಮ! ಈ ಕಾರಣದಿಂದಲೇ ನಮ್ಮ ಜನಪದ ಕವಿಗಳು ಈ ಸೀರೆಗಳ ಕುರಿತು ಬೇಕಾದಷ್ಟು ಮನಮುಟ್ಟುವ ಪದಗಳನ್ನು ಹಾಡಿರುವುದು.

ಸೀರೆ ಯಾವುದಾದರೂ ಆಗಲಿ, ಅದನ್ನು ಉಟ್ಟಾಗ ಸಿಗುವ ಸಮಾಧಾನ, ಸಾಮಾಜಿಕ ಗೌರವ ಅಪರಿಮಿತ. ಇತ್ತೀಚೆಗೆ ಅಮೆರಿಕ ಮತ್ತು ಬ್ರಿಟನ್‌ನಲ್ಲಿ ಇರುವ ಅನೇಕ ನಮ್ಮ ಅನಿವಾಸಿ ಭಾರತೀಯ ಮಹಿಳೆಯರು ಸೀರೆ ಉಟ್ಟುಕೊಂಡು ಟೀವಿಯಲ್ಲಿ ವಾರ್ತೆ ಓದುವುದನ್ನು ನೋಡುತ್ತಿದ್ದೇವೆ. ಇವರ ಉಡುಪಿನಿಂದ ಆಕರ್ಷಿತರಾದ ಅಲ್ಲಿಯ ಮಹಿಳೆಯರು ಈ ಸೀರೆಯ ಮೋಡಿಗೆ ಮರುಳಾಗಿ ಭಾರತದಿಂದ ಇಂಥ ಸೀರೆಯನ್ನು ಖರೀದಿಸಲೇ ಪ್ರವಾಸಕ್ಕೆ ಬರುತ್ತಾರೆ. ಹೀಗಾಗಿ ಸೀರೆ ಭಾರತೀಯ ಪ್ರವಾಸೋದ್ಯಮವನ್ನೂ ಉತ್ತೇಜಿಸಿದೆ ಎಂದರೆ ತಪ್ಪಿಲ್ಲ.

ಸೀರೆ ಗ್ಲಾಮರ್ ಲುಕ್ ಕೊಡುವುದಿಲ್ಲ ಎಂಬುದು ಕೆಲವರ ವಾದ. ಆದರೆ ಇದು ಒಪ್ಪುವಂಥ ಮಾತಲ್ಲ. ಸೀರೆಗೂ ಗ್ಲಾಮರ್ ಲುಕ್ ಕೊಡುವ ಸಾಮರ್ಥ್ಯ ಇದೆ.

ಖ್ಯಾತ ನಟಿ ಮಾಧುರಿ ದೀಕ್ಷಿತ್ ಅಂದವಾಗಿ ಸೀರೆ ಉಟ್ಟುಕೊಂಡೇ 'ಬೇಟಾ' ಚಿತ್ರದಲ್ಲಿ, 'ಧಕ್..ಧಕ್.. ಕರನೇ ಲಗಾ' ಎಂಬ ಹಾಡಿಗೆ ಬೋಲ್ಡಾಗಿ ಹೆಜ್ಜೆ ಹಾಕುತ್ತಾ ವೀಕ್ಷಕರನ್ನು ಹುಚ್ಚೆಬ್ಬಿಸಿದ್ದರು. ಕನ್ನಡದ ಕನಸಿನ ರಾಣಿ ಮಾಲಾಶ್ರೀಯೂ ಸೀರೆಯುಟ್ಟೇ 'ಒಳಗೆ ಸೇರಿದರೆ ಗುಂಡು ಹುಡುಗಿಯಾಗುವಳು ಗಂಡು' ಎಂಬ ಹಾಡಿಗೆ ಹೆಜ್ಜೆ ಹಾಕಿದ್ದು ಎಲ್ಲರಿಗೂ ಗೊತ್ತೇ ಇದೆ. ಹೇಮಾಮಾಲಿನಿ, ಸಾಯಿರಾಬಾನು ಅವರಿಂದ ಹಿಡಿದು, ಐಶ್ವರ್ಯ, ಕಾಜಲ್, ಕರೀನಾ, ದೀಪಿಕಾ ಪಡುಕೋಣೆಯವರಿಗೂ ಕಂಚಿ ಸೀರೆ ಎಂದರೆ ಅಚ್ಚುಮೆಚ್ಚು.